ಪ್ರತಿದಿನ ಬಂದು ಮನೆ ದೇವರಿಗೆ ಪೂಜೆ ಮಾಡಿಕೊಡುವವರಿದ್ದರೆ, ಒಂದಿಷ್ಟು ಖರ್ಚು ಮಾಡಿ ಪೂಜೆ ಮಾಡಿಸಲು ಕೇಶವ ಭಟ್ಟರು ತಯಾರಿದ್ದರು. ಆದರೆ, ಹಾಗೆ ಮಾಡುವವರು ಊರಲ್ಲಿ ಯಾರಿದ್ದಾರೆ. ಅಂಥವರು ಯಾರೂ ಅವರಿಗೆ ಸಿಗಲಿಲ್ಲ.

ಕೊನೆಗೆ ಮತ್ತೆ ಲಕ್ಷ್ಮೀನಾರಾಯಣ ಭಟ್ಟರ ಬಳಿ ಹೋಗಿ ಕೇಳಿದರೆ ಅವರು ಹೇಳಿದ್ದಿಷ್ಟು: "ಮತ್ತೆಂತದ್ದು ಮಾಡುತ್ತೀಯೆ? ಹತ್ತಿರದಲ್ಲಿ ಊರಲ್ಲೆಲ್ಲಾದರೂ ದೇವಸ್ಥಾನವಿದ್ದರೆ ಹೇಳು. ಅಲ್ಲಿಗೆ ನಿಮ್ಮ ದೇವರನ್ನು ತಗೊಂಡು ಹೋಗಿ ಪ್ರತಿಷ್ಠಾಪನೆ ಮಾಡೋಣ. ನಾನೂ ಬರುತ್ತೇನೆ."

ಈಗ ಕೇಶವಭಟ್ಟರಿಗೆ ನಿರಾಳವೆನಿಸಿತು.

ತಮ್ಮ ಸಮಸ್ಯೆಗೆ ಇದು ಪರಿಹಾರವಾಗಬಹುದೆ?

ತಮ್ಮ ಮನಸ್ಸಿಗೆ ಪೂರ್ಣ ಸಮಾಧಾನವಿಲ್ಲ. ಮನೆ ದೇವರಿಗೆ ಪೂಜೆ ಮಾಡದಿದ್ದರೆ ದೇವರ ಶಾಪಕ್ಕೆ ತಾನು ಗುರಿಯಾಗುವುದಿಲ್ಲವೆ?

ಆದರೂ ಈಗ ಬೇರೆ ದಾರಿಯಿಲ್ಲ.

ಅಲ್ಲಾದರೂ ನಿತ್ಯ ಪೂಜೆ ಆಗುತ್ತದೆಯಲ್ಲಾ?

ಚಂದ್ರಶೇಖರಯ್ಯನವರೇ ಮಾಡಿದ್ದಾರೆಂದರೆ ಮತ್ತೆ ತಮಗೇನು? ಒಂದಿಷ್ಟು ಸಮಾಧಾನವೆನಿಸಿತು.

ಒಂದು ಶುಭ ಮುಹೂರ್ತದಂದು ಮನೆಯಲ್ಲಿನ ಕೆಲವು ದೇವರ ಮೂರ್ತಿಗಳನ್ನು ದೇವಸ್ಥಾನಕ್ಕೆ ಸಾಗಿಸುವ ಕೆಲಸ ಸಂಭ್ರಮದಿಂದಲೇ ನಡೆಯಿತು. ಇದು ಊರಿನ ಒಂದು ಸಂಭ್ರಮದ ಕೆಲಸವಾದರೂ ಇದರ ಪರಿಣಾಮ ಬೇರೆಯೇ ಆಯಿತು.

ಮನೆಯಲ್ಲಿ ಪೂಜೆ ಮಾಡಲು ತೊಂದರೆ ಇದ್ದವರಿಗೆಲ್ಲಾ ಇದೊಂದು ಸುಲಭ ಮಾರ್ಗವಾಗಿ ಬಿಟ್ಟಿತು. ಮೂಲ ಈಶ್ವರಲಿಂಗದ ಜೊತೆಗೆ ದಿನದಿನಕ್ಕೂ ಹೆಚ್ಚುತ್ತಿರುವ ಮನೆ ಮನೆ ವಿಗ್ರಹಗಳಿಗೆ ಪೂಜೆ ಮಾಡಬೇಕಾದ ಪರಿಸ್ಥಿತಿ. ಶಂಕರನಾರಾಯಣ ಭಟ್ಟ ಒಳಗೊಳಗೇ ಕುದ್ದು ಹೋದ. ಸ್ವತಃ ಅವನಿಗೆ ಪೂಜೆಯೆಂದರೆ ಅಲರ್ಜಿ. ಹೇಗಾದರೂ ಇದರಿಂದ ಪಾರಾಗಬೇಕು ಎಂದುಕೊಂಡವನಿಗೆ ಮದುವೆಯಾದ ಅನಂತರ ದಾರಿಯೇ ಬದಲಾಗಿಬಿಟ್ಟಿತು.

ತೂಕಡಿಸುತ್ತಿದ್ದವನಿಗೆ ಹಾಸಿಗೆ ಹಾಕಿಕೊಟ್ಟಂತಾಯಿತು.

